| ಅ) ವರ್ಷ | ನಡೆದ ಲೋಕ್ ಅದಾಲತ್‌ಗಳ ಒಟ್ಟು ಸಂಖ್ಯೆ | ಇತ್ಯರ್ಥವಾದ ಮೊಕದ್ದಮೆಗಳು |
|---|---|---|
| 1996-97 | 487 | 17,492 |
| 1997-98 | 17 | 780 |
| | (1-4-1997 ರಿಂದ 31-7-1997) | |

**ಕುಣಿಗಲ್ ಮತ್ತು ತುಮಕೂರು ಲೋಕೋಪಯೋಗಿ ಇಲಾಖೆಯ ರಸ್ತೆಗಳ ಅಭಿವೃದ್ಧಿ**

2020 - ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಕುಣಿಗಲ್ ಮತ್ತು ತುಮಕೂರು ಮಧ್ಯೆ ಇರುವ ರಾಜ್ಯ ಹೆದ್ದಾರಿ ಕೆ.ಕೆ. ರಸ್ತೆಯನ್ನು ಅಗಲಪಡಿಸುವ ಮತ್ತು ಅಭಿವೃದ್ಧಿ ಪಡಿಸುವ ಕಾರ್ಯದಲ್ಲಿ ಇದುವರೆಗೆ ಸಾಧಿಸಿರುವ ಪ್ರಗತಿಯೇನು?*

*ಆ) ಈ ಕಾರ್ಯಕ್ರಮದ ವಿಳಂಬಕ್ಕೆ ಕಾರಣವೇನು? ಮತ್ತು ಪೂರ್ಣಗೊಳಿಸಲು ಹಾಕಿಕೊಂಡಿರುವ ಯೋಜನೆಗಳೇನು?*

*ಇ) ಈ ಕಾರ್ಯಕ್ರಮ ಪೂರ್ಣಗೊಳಿಸಲು ಸರ್ಕಾರವು ಹಾಕಿಕೊಂಡಿರುವ ಯೋಜನೆ ಏನು?*

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಸದರಿ ರಸ್ತೆಯ 107ನೇ ಕಿ.ಮೀ. ನಿಂದ 140 ನೇ ಕಿ.ಮೀವರೆಗೆ ಅಗಲಪಡಿಸುವ ಮತ್ತು ಅಭಿವೃದ್ಧಿಪಡಿಸುವಲ್ಲಿ ಇದುವರೆವಿಗೆ 6.66 ಲಕ್ಷ ರೂ.ಗಳ ಆರ್ಥಿಕ ಪ್ರಗತಿ ಸಾಧಿಸಲಾಗಿದೆ.

ಆ) ಗುತ್ತಿಗೆದಾರರು ಸಕಾಲಕ್ಕೆ ಕಾರ್ಯನಿರ್ವಹಿಸಲು ವಿಫಲರಾಗಿರುವುದೇ ಕೆಲಸದ ವಿಳಂಬಕ್ಕೆ ಕಾರಣ. ಕಾಮಗಾರಿಯನ್ನು ಶೀಘ್ರ ಪೂರೈಸುವ ಸಲುವಾಗಿ, ಸದರಿ ಗುತ್ತಿಗೆಯನ್ನು ರದ್ದುಪಡಿಸಿದ್ದು, ಮರು ಗುತ್ತಿಗೆ ಕರೆಯಲು ಕ್ರಮ ತೆಗೆದುಕೊಳ್ಳಲಾಗಿದೆ.

ಇ) 'ಆ'ನಲ್ಲಿ ಉತ್ತರ ಸಲ್ಲಿಸಿದೆ.

**ತುರುವೇಕೆರೆ ತಾಲ್ಲೂಕಿನ ಲೋಕೋಪಯೋಗಿ ಇಲಾಖೆ ವತಿಯಿಂದ ಕೈಗೊಂಡಿರುವ ಕ್ರಮಗಳು**

2021 - ಶ್ರೀ ಹೆಚ್.ಬಿ. ನಂಜೇಗೌಡ (ತುರುವೇಕೆರೆ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ತುರುವೇಕೆರೆ ತಾಲ್ಲೂಕಿನಲ್ಲಿ ಲೋಕೋಪಯೋಗಿ ಇಲಾಖೆ ವತಿಯಿಂದ ಕೈಗೊಂಡಿರುವ ಕಾರ್ಯಕ್ರಮಗಳ ವಿವರಗಳನ್ನು ತಿಳಿಸುವಿರಾ?*

*ಅ) ಸದಸ್ಯರು ನಿರ್ದಿಷ್ಟ ಕಾರ್ಯಕ್ರಮದ ಬಗ್ಗೆ ನಮೂದಿಸಿರುವುದರಿಂದ ಮಾನ್ಯ ಸದಸ್ಯರಿಂದ ಸ್ಪಷ್ಟೀಕರಣ ಕೇಳಬಹುದು ?*

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ವಿವರವನ್ನು ಪ್ರತ್ಯೇಕವಾಗಿ ಅನುಬಂಧದಲ್ಲಿ ನೀಡಲಾಗಿದೆ.

ಆ) ಗಮನಿಸಿದೆ.

## ಅನುಬಂಧ

| ಕ್ರಮ ಸಂಖ್ಯೆ | ಕಾರ್ಯಕ್ರಮ | ಕಾಮಗಾರಿಯ ವಿವರ | ಕೆಲಸದ ಅಂದಾಜು | 97-98ರ ಆಯವ್ಯಯ ದಲ್ಲಿನ ಅನುದಾನ |
|---|---|---|---|---|
| 1 | 2 | 3 | 4 | 5 |
| 1. | 5054 ರಸ್ತೆ ಮತ್ತು ಸೇತುವೆ ನಿರ್ಮಾಣ 30 ಲಕ್ಷ ರೂ. ಶಾಸಕರ ಕಾರ್ಯಕ್ರಮ (ಆಯವ್ಯಯ ಪುಟ 202, 203) | ನಲ್ಲಿಗೆರೆ ಶಿರಾ ರಸ್ತೆಯ ಕಿಮೀ.0.0.ರಿಂದ 9.00ರಲ್ಲಿ ಆಯ್ದ ಭಾಗಗಳಲ್ಲಿ ಅಗಲ ಗೊಳಿಸುವುದು ಹಾಗೂ ಡಾಂಬರೀಕರಣ. | 10.00 | 1.25 |
| 2. | -"- | ದಿಡಗ-ದಬ್ಬೇಗಟ್ಟ ರಸ್ತೆಯ ಕಿ.ಮೀ. 77.00 ರಿಂದ 78.0ರಲ್ಲಿ ಆಯ್ದ ಭಾಗಗಳಲ್ಲಿ ಜೆಲ್ಲಿ ಕಾಮಗಾರಿ ಹಾಗೂ ಕಿಮೀ. 77.80 ರಲ್ಲಿ ಸೇತುವೆ ನಿರ್ಮಾಣ. | 2.00 | 2.05 |
| 3. | -"- | ತುರುವೇಕೆರೆ ದಬ್ಬೇಘಟ್ಟ ರಸ್ತೆಯ ಕಿ.ಮೀ. 24ರಲ್ಲಿ ಸೇತುವೆ ನಿರ್ಮಾಣ. | 2.50 | 0.85 |
| 4. | -"- | ಬೋಚಿಹಳ್ಳಿ ತುರುವೇಕೆರೆ ರಸ್ತೆಯ ಕಿ.ಮೀ. 0.0 ರಿಂದ 6.0 ರವರೆಗೆ ಡಾಂಬರು ಕಾಮಗಾರಿ. | 5.00 | 1.70 |
| 5. | -"- | ಯಡಿಯೂರು ಕಲ್ಲೂರು ರಸ್ತೆಯ ಆಯ್ದ ಭಾಗಗಳಲ್ಲಿ | 4.00 | 1.35 |

| 1 | 2 | 3 | 4 | 5 |
|---|---|---|---|---|
| | | ಜೆಲ್ಲಿ ಕಾಮಗಾರಿ ಹಾಗೂ ದೊಡ್ಡೇರಿ ಗ್ರಾಮದ ಬಳಿ ಸೇತುವೆ ನಿರ್ಮಾಣ | | |
| 6. | -"- | ಶ್ರೀರಂಗಪಟ್ಟಣ ಬೀದರ್ ರಸ್ತೆಯ ಕಿಮೀ. 76-78ರಲ್ಲಿ ರಸ್ತೆ ಅಗಲಗೊಳಿಸುವುದು ಹಾಗೂ ಡಾಂಬರ್ ಮಾಡುವುದು. | 4.00 | 2.00 |
| 7. | -"- | ಯಡಿಯೂರು ಕಲ್ಲೂರು ರಸ್ತೆಯ ಕಿಮೀ.14.00ರಿಂದ 16.20 ರಲ್ಲಿಯ ಆಯ್ದ ಭಾಗಗಳಲ್ಲಿ ರಸ್ತೆಯನ್ನು ಅಗಲಗೊಳಿಸಿ ಡಾಂಬರು ಮಾಡುವುದು. | 2.50 | 0.70 |
| 8. | 5054 03.33 ಮೇಲ್ದರ್ಜೆ ಗೇರಿಸಿದ ರಸ್ತೆಗಳ ಅಭಿವೃದ್ಧಿ. (ಆಯವ್ಯಯ ಪುಟ ಸಂಖ್ಯೆ 258). | ತುರುವೇಕೆರೆ ವರಹಸಂದ್ರ ರಸ್ತೆ ಅಭಿವೃದ್ಧಿ ಮತ್ತು ಡಾಂಬರು. | 8..00 | - |
| 9. | 5054-03 ರಾಜ್ಯದ ರಾಜ ಮಾರ್ಗಗಳು 337 ರಸ್ತೆ ಕೆಲಸ 52 ಇತರ ರಸ್ತೆಗಳ ನಿರ್ಮಾಣ. (ಆಯವ್ಯಯ ಪುಟ ಸಂಖ್ಯೆ 163). | ತುರುವೇಕೆರೆ ನಿಟ್ಟೂರು ರಸ್ತೆ ಕಿಮೀ.1.0-9.0ರವರೆಗೆ ಅಭಿವೃದ್ಧಿ. | 10.00 | 0.80 |
| 10. | 5054 ರಸ್ತೆ ಮತ್ತು ಸೇತುವೆಗಳ ನಿರ್ಮಾಣ ನಬಾರ್ಡ್ ಆರ್.ಐ ಡಿ.ಎಫ್.-2 ಯೋಜನೆ. (ಆಯವ್ಯಯ ಪುಟ ಸಂಖ್ಯೆ 66) | ನಲ್ಲಿಗೆರೆ ಶಿರಾ ರಸ್ತೆಯಲ್ಲಿ ಸೇತುವೆ ನಿರ್ಮಾಣ. | 20.00 | 20.00 |
| 11. | -"- | ನಲ್ಲಿಗೆರೆ ಶಿರಾ ರಸ್ತೆ ಅಭಿವೃದ್ಧಿ | 40.00 | 40.00 |
| 12. | 5054 ರಸ್ತೆ ಮತ್ತು ಸೇತುವೆಗಳ ನಿರ್ಮಾಣ ನಬಾರ್ಡ್ ಆರ್.ಐ. ಡಿ.ಎಫ್-2 ಯೋಜನೆ (ಆಯವ್ಯಯ ಪುಟ ಸಂಖ್ಯೆ 66) | ಬೋಚಿಹಳ್ಳಿ ತುರುವೇಕೆರೆ ದಬ್ಬೇಗಟ್ಟ ರಸ್ತೆ ಅಭಿವೃದ್ಧಿ | 29.70 | 29.70 |

| 1 | 2 | 3 | 4 | 5 |
|---|---|---|---|---|
| 13. | -"- | ಎಡಿಯೂರು ಕಲ್ಲೂರು ರಸ್ತೆ ಅಭಿವೃದ್ಧಿ | 19.80 | 19.80 |
| 14. | 4059 ಲೋ.ಇ.ಕಾಮಗಾರಿ 54 ಪೊಲೀಸ್(ಆಯವ್ಯಯ ಪುಟ ಸಂಖ್ಯೆ 8) | ತುರುವೇಕೆರೆ ಪೊಲೀಸ್ ಕಟ್ಟಡದ ನಿರ್ಮಾಣ. | 5.00 | 0.25 |
| 15. | 4059 ಲೋಇ ಕಾಮಗಾರಿ ಜಿಲ್ಲಾಡಳಿತ (ಆಯವ್ಯಯ ಪುಟ ಸಂಖ್ಯೆ 19) | ತುರುವೇಕೆರೆ ಮಿನಿ ವಿಧಾನ ಸೌಧ ನಿರ್ಮಾಣ | 45.00 | 1.00 |
| 16. | 4202 ವಿದ್ಯಾಭ್ಯಾಸ ಮತ್ತು ಸಂಸ್ಕೃತಿ ಉನ್ನತ ಶಿಕ್ಷಣ (ಆಯವ್ಯಯ ಪುಟ ಸಂಖ್ಯೆ 41). | ತುರುವೇಕೆರೆ ಪ್ರಥಮ ದರ್ಜೆ ಕಾಲೇಜು ಕಟ್ಟಡ ನಿರ್ಮಾಣ. | 15.00 | 0.50 |
| 17. | 4403 ಪ್ರಾಣಿ ಸಂಗೋಪನೆ 102 ದಿನಗಳ ಆಭಿವೃದ್ಧಿ ಪಶುಸಂಗೋಪನೆ. (ಆಯವ್ಯಯ ಪುಟ ಸಂಖ್ಯೆ 74) | ಕುಣಕೇನಹಳ್ಳಿ ಗ್ರಾಮದಲ್ಲಿ ಹಳ್ಳಿಕಾರ್ ದನಗಳ ಉತ್ಪತ್ತಿ ಕೇಂದ್ರ ಕಟ್ಟಡ ಹಾಗೂ ಸಿಬ್ಬಂದಿಗಳ ವಸತಿ ಗೃಹಗಳ ನಿರ್ಮಾಣ. | 18.00 | - |

**ಪಶುಗಳಿಗೆ ಕೃತಕ ಗರ್ಭಧಾರಣೆ**

2022- ಶ್ರೀ ಡಿ.ಆರ್. ಪಾಟೀಲ್ (ಗದಗ್) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ರಾಜ್ಯದಲ್ಲಿ ಇಲಾಖೆಯ ವತಿಯಿಂದ ನಡೆಯುವ ಕೃತಕ ಗರ್ಭಧಾರಣೆಯಲ್ಲಿ ಪಶುಗಳು ಗರ್ಭಧರಿಸುವ ಪ್ರಮಾಣ ಕಡಿಮೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

*ಆ) ಬಿ.ಎ.ಆಯ್.ಎಫ್ ಸಂಸ್ಥೆಯ ಮುಖಾಂತರ ನಡೆಯುವ ಕೃತಕ ಗರ್ಭಧಾರಣೆಯಲ್ಲಿ ಪಶುಗಳ ಗರ್ಭಧರಿಸುವ ಪ್ರಮಾಣ ಯಾವಾಗಲೂ ಇಲಾಖೆಯ ಪ್ರಮಾಣಕ್ಕಿಂತ ಅಧಿಕವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

*ಇ) ಇಲಾಖೆಯಿಂದಾಗುವ ಗರ್ಭಧಾರಣಾ ಪ್ರಮಾಣ ಸಹ ಬಿ.ಎ.ಆಯ್.ಎಫ್. ದವರಂತಾಗಲೂ ಅವರ ವಿಧಿ ವಿಧಾನ ಅಳವಡಿಸಿಕೊಳ್ಳಲು ಇರುವ ತೊಂದರೆಗಳಾವುವು?*

*ಈ) ಒಂದು ವೇಳೆ ಇಲಾಖೆಯಿಂದ ನಡೆಯುವ ಕೃತ್ರಿಮ ಗರ್ಭಧಾರಣ ಕೆಲಸದಿಂದ ಪಶುಗಳ ಗರ್ಭ ಧರಿಸುವಿಕೆ ಉತ್ತಮವಾಗುವುದಿಲ್ಲವೆಂದರೆ ಈ ಕೆಲಸವನ್ನು ರಾಜ್ಯದಾದ್ಯಂತ ಬಿ.ಎ.ಐ.ಎಫ್. ಸಂಸ್ಥೆಗೆ ವಹಿಸಿಕೊಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?*